**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 11**
**ಚಾ.ಸಾ.ಸಂಖ್ಯೆಃ 32**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಅಜಿತ ಕುಮಾರ ಹೊಸಮನಿ |
| ತಂದೆಯ ಹೆಸರುಃ | ಮಲ್ಲನಗೌಡ |
| ವಯಸ್ಸುಃ | **34** ವರ್ಷ |
| ಉದ್ಯೋಗಃ | ಪಿ. ಎಸ್. ಐ. ಮುಧೋಳ ಪಿ.ಎಸ್. |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 24.02.2026 ರಂದು ವಿ.ಸಿ. ಮೂಲಕ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

ನಾನು **14.06.2023** ರಿಂದ ಇಲ್ಲಿಯವರೆಗೆ ಪಿ. ಎಸ್. ಐ. ಅಂತಾ ಮುಧೋಳ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**1.** ದಿ: **15.06.2023** ರಂದು ನಾನು ಈ ಪ್ರಕರಣ ಮುಂದಿನ ತನಿಖೆಯನ್ನು ಚಾಸಾ-**31** ಇವರಿಂದ ಪಡೆದುಕೊಂಡು ಅದುವರೆಗೂ ಆದ ತನಿಖೆಯನ್ನು ಪರಿಶೀಲನೆ ಮಾಡಿರುತ್ತೇನೆ. ದಿ: **22.06.2023** ರಂದು ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲ ನಂ. ಕೆಎ-**48**/ಎಕ್ಸ-**6006** ನೇದ್ದನ್ನು ಪಿಸಿ-**1166** ಇವರು ನನ್ನ ಮುಂದೆ ಹಾಜರುಪಡಿಸಿದ್ದು, ನಾನು ಅದನ್ನು ಪಂಚರಾದ ಚಾಸಾ-**4** ಮತ್ತು **5** ರವರ ಸಮಕ್ಷಮ ಈಗ ನೋಡುತ್ತಿರುವ ನಿಪಿ-**22** ರಂತೆ ಪಂಚನಾಮೆ ಮಾಡಿ, ಜಪ್ತ ಮಾಡಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-**33** ಇವರು ವಹಿಸಿಕೊಂಡಿರುತ್ತಾರೆ.

**ಪಾಟಿಸವಾಲು: 3 ರಿಂದ 5 ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**

**1.** ಪ್ರಕರಣವು ಖೊಟ್ಟಿ ದೂರು ಇರುತ್ತದೆ ಅಂತ ತಿಳಿದರೂ ಕೂಡ ನಾನು ಈ ಪ್ರಕರಣದಲ್ಲಿ ತನಿಖೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ವಾಹನವನ್ನು ಆರೋಪಿತರ ಕಡೆಯಿಂದ ಜಪ್ತ ಮಾಡಿಲ್ಲ ಎಂದರೆ ಸರಿ. ಪ್ರಕರಣಕ್ಕೆ ವಾಹನ ಬೇಕಾಗಿರುವುದರಿಂದ ನಾನು ಈ ವಾಹನವನ್ನು

ಖೊಟ್ಟಿಯಾಗಿ ಪ್ರಕರಣದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ:**

ನಾನು ಆರೋಪಿತರಿಂದ ವಾಹನದ ಆರ್.ಸಿ. ಹಾಗೂ ಇತರ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**